೧	೨	೩	೪	೫
೧೫	೧೪	೨೫ ೫ ಮತ್ತು ೬ನೇ ಸಾಲು	ವಾದಕಾರಣ	ವ್ಯಾಜ್ಯಕಾರಣ
೧೬	೧೪	ಮೊದಲ ಸಾಲು ೨೭ ಕೊನೆಯಸಾಲು	ಸರ್ಕಾರಿ ಪ್ರಕರಣದ ೨೧ನೇ ಅರ್ಥದೊಳಗೆ	ಲೋಕ ೨೧ನೇ ಪ್ರಕರಣದ ಅರ್ಥ ವಾಪ್ತಿಯೊಳಗೆ
೧೭	೧೬	೩೧ (೨)ನೇ ಉಪ ಖಂಡದ (೧) ಬಾಬಿನ ೪ನೇ ಮತ್ತು ೬ನೇ ಸಾಲು	ವಿಚಾರಗಳು	ವಿಷಯಗಳು
೧೮	೧೭	ಉದ್ದೇಶ ಮತ್ತು ಕಾರಣಗಳ ಹೇಳಿಕೆಯ ಎರಡನೇ ಪ್ಯಾರ	ನ್ಯಾಯ ದೊರಕಿಸಿ ಕೊಡುವ	ನ್ಯಾಯವ ದೊರಕಿಸಿ ಕೊಡುವ
೧೯	೧೮	ಆರ್ಥಿಕ ಜ್ಞಾಪನ ಪತ್ರದ ಮೊದಲ ಸಾಲು	ಅಧಿನಿಯಮದ ವಿಶೇಷ	ಅಧಿನಿಯಮದ ಅಡಿ ವಿಶೇಷ
೨೦	೧೯	ಖಂಡ ೯	ಚಾಲಾಯಿಸಲಾಗುವ	ಚಲಾಯಿಸಬಹುದಾದ

ನಿ೦. ಹು. ಮುತ್ತಲಗೇರಿ
ಕಾರ್ಯದರ್ಶಿ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ, "೧೯೪೪ನೇ ಸಾಲಿನ ಕರ್ನಾಟಕ ವಿಶೇಷ ನ್ಯಾಯಾಧೀಕರಣ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ತಿದ್ದೋಲೆ ಗಳೊಡನೆ ಅಂಗೀಕರಿಸುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲ್ಪಟ್ಟಿತು)

ಸಭೆಯ ಮುಂದೆ ಮಂಡಿಸಲಾದ ಕಾಗದ ಪತ್ರಗಳು

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಹಾಗೂ ಕಂದಾಯ ಸಚಿವರು).—ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿ) ಅವರ ಪರವಾಗಿ.—ಭಾರತದ ನಿಯಂತ್ರಕರು ಹಾಗೂ ಮಹಾಲೇಖಾ ಪಾಲಕರವರು ಕರ್ನಾಟಕ ಸರ್ಕಾರದ ೧೯೨೨–೨೩ನೇ ಸಾಲಿಗೆ (ಕಂದಾಯ ಸ್ವೀಕಾರ) ಸಂಬಂಧಿಸಿದಂತೆ ನೀಡಿರುವ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು.—ಸಭೆಯ ಮುಂದೆ ಮಂಡಿಸಲಾಯಿತು.

ಈಗ ಸದನವನ್ನು ೧೦ ನಿಮಿಷಗಳ ಕಾಲ ಮುಂದೂಡುತ್ತೇನೆ. ಸಭೆಯು ಮತ್ತೆ ೪–೦೦ ಘಂಟೆಗೆ ಸೇರಲಿದೆ.

(ಸದನವು ೩–೪೫ ಕ್ಕೆ ಮುಂದೂಡಲ್ಪಟ್ಟು ಮತ್ತೆ ೪–೦೦ ಘಂಟೆಗೆ ಸೇರಲು ನಿಶ್ಚಯಿಸಿತು)

(ಸಭೆಯು ೫–೦೩ ಕ್ಕೆ ಪ್ರಾರಂಭವಾಯಿತು, ಮಾನ್ಯ ಸಭಾಧ್ಯಕ್ಷರು (ಶ್ರೀ ವಿ. ಎಸ್. ಕೌಜಲಗಿ ಯವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)